Attack of residences belonging to Hindus in Bangalore

SRI A. LAKSHMI SAGAR.— Sir, some serious incident has taken place yesterday evening in the road leading to Visveswarapuram Circle from City Market area. Some shops and residences of Hindus have been attacked it appears systematically and the victims have been assaulted, or otherwise very seriously dealt with. and they are under very serious grip of fear of their lives and their property. The hon member of this House under whose Assembly territorial constituency this area comes was prevented from going and visiting and asking about the welfare of the residents in the area I mean my learned friend Smt. S. Pramila, She was not allowed to go and enquire about the welfare of the residents. She has been systematically persecuted, she has been accused in a case allegedly committed by her and shehas also been subsequently served with anotice under Section 107 Cr. P. C.,which deals with security proceedings against any social elements. I do not know how my learned friend Smt. Pramila can be an unsocial element.

The unfortunate situation is another Member of this House, who was also allegedly involved in such a criminal offence and who is also an accused, has been elevated as a full Member of this Cabinet. I am stating all this in order to draw attention to a patently illegal and partisan attitude that is being adopted by the Government. I am not very much interested in the matter affecting my learned friend Smt. Pramila she may be hanged if the matter is proved before a Court of law that is a different thing. The more important thing is that there has been an attempt on the part of certain section of the society to attack mercilessly without reason or with reason. Unless the Government wakes up and gives adequate protection to the residents affected the situation may become difficult. The Government should see that such a thing is not repeated. Secondly, those people who are responsible for this outrageous attack on the peaceful residents of the area must be punished and the residents of the area must be given protection here and now, otherwise the Government that is in office is not worth the salt to be in office for a moment longer than they deserve. This is a very serious matter. I want the Hon'ble Minister to make a statement before the House rises this evening.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್ ಅವರು ಸಿಟಿ ಮಾರ್ಕೆಟ್ ಹತ್ತಿರದಲ್ಲಿ ನಡೆದ ಗೊಂದಲದ ಬಗ್ಗೆ ಮತ್ತು ತನ್ಮೂಲಕ ಕೆಲವಾರು ನಾಗರೀಕರ ಮೇಲೆ ಅಮಾನುಷವಾಗಿ ಹಲ್ಲೆಯಾಗಿದೆ ಹಾಗೂ ಮತ್ತು ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮಿಳಾರವರು ಆಲ್ಲಿಗೆ ಹೋಗಲಿಕ್ಕೆ ಬಿಡಲಿಲ್ಲ ಎಂಬುದರ ಬಗ್ಗೆ ಹೇಳಿದ್ದಾರೆ. ಆದರೆ ಈ ಮನೆಯ ಮಾನ್ಯ ಸದಸ್ಯರ ವಿಚಾರದಲ್ಲಿ ಎಲ್ಲಾ ರೀತಿಯ ರಕ್ಷಣೆ, ಮರ್ಯಾದೆ ಮತ್ತು ಗೌರವ ಸಲ್ಲಬೇಕು. ಅದರಲ್ಲಿ ಏನೂ ಬಿನ್ನಾಭಿ ಪ್ರಾಯವಿಲ್ಲ, ಈ ವಿಷಯದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು

ಕೊಳ್ಳುವುದಕ್ಕೆ ಎಂದೂ ಹಿಂದೆ ಮುಂದೆ ನೋಡುವುದಿಲ್ಲ. ಕಾನೂನು ಚೌಕಟ್ಟಿನಲ್ಲಿ ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಇನ್ನು ಸಿಟಿ ಮಾರ್ಕೆಟ್ ಹತ್ತಿರ ಏನು ವ್ಯವಹಾರ ನಡೆದಿದೆ ಅದನ್ನು ಸಹ ವಿಚಾರ ಮಾಡುತ್ತೇವೆ. ಬೆಂಗಳೂರು ನಗರದ ಎಲ್ಲ ಜನರ ಆಸ್ತಿ ಮತ್ತು ಪ್ರಾಣಕ್ಕೆ ಯಾವ ಅಪಾಯವೂ ಬರದಂತೆ ರಕ್ಷಣೆ ಕೊಟ್ಟಿದ್ದೇವೆ. ಜೊತೆಗೆ ಇನ್ನು ಮುಂದೆಯೂ ರಕ್ಷಣೆ ಕೊಡುತ್ತೇವೆಂದು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇದರ ಬಗ್ಗೆ ಇನ್ನು ಕೆಲವರು ಹೇಳಿದ್ದಾರೆ, ಆದ್ದರಿಂದ ಇದರ ಬಗ್ಗೆ ಒಂದು ರಿಪೋರ್ಟ್ ತರಿಸಿ ಸಭೆಗೆ ಕೊಡುತ್ತೇನೆ

SRI A. LAKSHMI SAGAR.— Sir, this is a very serious matter, which if not contained within time with an iron hand, is likely to engulf the entire City perhaps it may spread outside the areas also. That is the seriousness with which I am raising this matter. One other matter which the Hon. Minister did not choose to answer is what action the Government is thinking of taking against those miscreants responsible for these outrageous acts on one section of the society.

ಶ್ರೀಮತಿ ಎಸ್. ಪುಷ್ಪಾವತಿ (ಚಾಮರಾಜಪೇಟೆ).— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಏನು ನಡೆದಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಸೆಕ್ಷನ್ ೫೫ನ್ನು ಹಾಕಿ ಸಿಟಿ ಮಾರ್ಕೆಟ್ ಏರಿಯಾಕ್ಕೆ ನಾನು ಹೋಗದಂತೆ ನಿರ್ಬಂಧ ಹಾಕಿದ್ದಾರೆ. ನಾನು ಎಂ ಎಲ್ ಎ. ಆಗಿ ಆ ಕ್ಷೇತ್ರಕ್ಕೆ ಹೋಗಬಾರದು ಎಂದು ನಿರ್ಬಂಧ ಹಾಕುವುದಾದರೆ ನಾನು ಯಾವ ರೀತಿ ನನ್ನ ಕ್ಷೇತ್ರದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು ? ಇಲ್ಲಿ ನಿಮಗೆ ನಿಜವಾಗಿ ಹೇಳುವುದಾದರೆ ಅಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರ್ ಆದ ಶ್ರೀ ಕುಶಾಲಪ್ಪ ಅವರು. ನಾವು ಅಲ್ಲಿಗೆ ಹೋಗಿದ್ದಾಗ ನನ್ನ ಜೊತೆಯಲ್ಲಿ ಶಾಮಣ್ಣ ನವರು, ಕೃಷ್ಣ ಅಯ್ಯರ್‌ರವರು ಇದ್ದರು, ನಾವು ಶಾಸಕರು ಎನ್ನುವ ಗೌರವ ಇಲ್ಲದೆ ನೀವು ಇಲ್ಲಿ ಒಳಕೂಡದು ನೀವು ಹೋಗಿ ಎಂದು ಈ ರೀತಿ ಹೇಳುತ್ತಾರೆ. ಇದು ಸರಿಯೇ ? ಅಲ್ಲಿನ ನಾಗರೀಕರಿಗೆ ತೊಂದರೆಯಾದಾಗ ನಾವು ನೋಡಲು ಅಡ್ಡಿ ಮಾಡುವುದಾದರೆ, ಅದಕ್ಕೆ ನೀವು ಹೇಳಿಬಿಡಿ, ಅಲ್ಲಿಯ ಜನರ ಹಿತಾಸಕ್ತಿಯನ್ನು ನಾವೇ ನೋಡುತ್ತೇವೆಂದು.

೨-೦೦ ಪಿ. ಎಂ.

ನಿನ್ನೆ ೬ ಗಂಟೆಯಲ್ಲಿ ಒಬ್ಬ ಹೆಂಗಸನ್ನು ಹೊಡೆದಿದ್ದಾರೆ ಆಕೆಯ ಮನೆಯಲ್ಲಿ ಆಕೆಯ ಸೀರೆ ಹಿಡಿದು ಎಳೆದಂತಹ ಪರಿಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಅದೇ ರೀತಿ ಇನ್ನೊಬ್ಬ ೧೬ ವರ್ಷದ ಹುಡುಗಿಯನ್ನು ಹೊಡೆದಿದ್ದಾರೆ. ಆಕೆಯನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದಾರೆ. ಸುಮಾರು ೩೦ ಮನೆ ಗಳ ಮೇಲೆ ಧಾಳಿ ನಡೆದಿದೆ. ಅಷ್ಟೇ ಅಲ್ಲ, ಅಲ್ಲಿನ ಜನಗಳು ಬಹಳ ಭಯಭೀತರಾಗಿದ್ದಾರೆ. ರಾತ್ರಿಯಲ್ಲಿ ಆಂಗಡಿಗಳನ್ನು ಸುಟ್ಟು ಹಾಕುತ್ತೇವೆ ಎಂದು ಹೇಳಿ ಹೆದರಿಕೆಯನ್ನುಂಟುಮಾಡಿದ್ದಾರೆ. ಆ ಏರಿಯಾದ ಇನ್ಸ್‌ಪೆಕ್ಟರ್ ಮುಂದೆ ಅವರ ಸಮ್ಮುಖದಲ್ಲಿ ಹೇಳಿದ್ದಾರೆ, ಆಂಗಡಿಗಳನ್ನು ಮನೆಗಳನ್ನು ಲೂಟಿ ಮಾಡು ತ್ತೇವೆ ಎಂದು. ಇದರ ಬಗ್ಗೆ ಅಲ್ಲಿ ಸಂಬಂಧಪಟ್ಟ ಸಬ್ ಇನ್ಸ್‌ಪೆಕ್ಟರ್ ಯಾವ ರೀತಿಯ ಕ್ರಮ ತೆಗೆದು ಕೊಂಡಿದ್ದಾರೆ ? ನನ್ನ ಕ್ಷೇತ್ರದಲ್ಲಿ ಭಯಭೀತವಾದ ವಾತಾವರಣ ಉಂಟಾಗಿದೆ. ಅಲ್ಲಿ ಯಾರೂ ಓಡಾಡು ವುದಕ್ಕೆ ಆಗುವುದಿಲ್ಲ. ನಮ್ಮ ಕ್ಷೇತ್ರದ ನಾಗರೀಕರಿಗೆ ಯಾವ ರೀತಿಯ ರಕ್ಷಣೆಯನ್ನು ಕೊಡುತ್ತೀರಾ ? ಈ ಬಗ್ಗೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಆಂಗಡಿಯನ್ನು ಸುಟ್ಟುಹಾಕು ತ್ತೇವೆ ಎನ್ನುವ ಸ್ಥಿತಿಗೆ ಈ ಜನರು ಬಂದಿದ್ದಾರೆ. ಅಲ್ಲಿಯ ಜನಗಳು ನನಗೆ ಬಂದು ಹೇಳಿದ್ದಾರೆ. ನೀವು ಅಲ್ಲಿಗೆ ಬರಬೇಡಿ ಎಂದು ನಮಗೆ ಹೇಳಿದ್ದಾರೆ. ನಾನು ನನ್ನ ಕ್ಷೇತ್ರಕ್ಕೆ ಹೋಗಬೇಕೋ ಬೇಡವೋ ?

MR. SPEAKER.— I shall also speak to the concerned persons.

SRI A. LAKSHMI SAGAR.— I would like to know how many preventive arrests have been made in the light of the disclosures made now. The Hon. Minister Sri Moily may be in possession of some information in this behalf and he may give it to us.

ಶ್ರೀ ಅಜೀಜ್ ಸೇಟ್.— ಮಾನ್ಯ ಸದಸ್ಯರು ಬೆಂಗಳೂರು ಸಿಟಿ ವಿಷಯ ಹೇಳಿದ್ದಾರೆ. ಇದೇ ರೀತಿ ಶಿರಾ, ಚನ್ನಪಟ್ಟಣ, ಹುಣಸೂರು, ಕೊಳ್ಳೇಗಾಲ, ಕೊಪ್ಪಳ, ಮೈಸೂರು ಇತ್ಯಾದಿ ಪ್ರದೇಶಗಳಲ್ಲಿ ಲಾ ಅಂಡ್ ಆರ್ಡರ್ ಹದಗೆಟ್ಟಿದೆ.

Is there any law and order prevailing there or is it to terrories the weaker sections and minorities ? What is the intention of the Government ?

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ಸಂಗ್ರಹ ಮಾಡುತ್ತೇವೆ.

MR. SPEAKER.— I had also no notice of this subject.

SRI A, LAKSHMI SAGAR.— I could not give notice. There are certain matters about which notice cannot be given. You must kindly excuse me for the giving notice about this incident and come to our protection In certain circumstances notice cannot be given.

SRI AZEEZ SAIT.— The incident has happened abruptly and there is no law and order and peaceful atmosphere there. Another thing is that we have to go and collect our papers and other thing because names are not put on the pige on holes. I do not know whether your Legislature Seeretariate is alive or at stand still. ಇದೆಲ್ಲಾ ಸರಿಯಾದರೆ ಕಾರ್ಯಕ್ರಮ ಸರಿಯಾಗಿ ಆಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ -ಮಾನ್ಯ ಅಧ್ಯಕ್ಷರೇ, ಕಾನೂನು ವ್ಯವಸ್ಥೆಯಲ್ಲಿ ಸರ್ಕಾರಯಾವಾಗಲೂ ಬಿಗಿ ಯಾಗಿ ವರ್ತಿಸುತ್ತದೆ. ಯಾರೇ ಆಗಲೀ, ಈ ಗೊಂದಲಕ್ಕೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸ ಬೇಕು. ಮತ್ತು ಅವರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಶಾಸಕಿ ಶ್ರೀಮತಿ ಪ್ರಮಿಳಾ ಅವರು ಈ ಸಭೆಗೆ ಬೇಕು. ಅವರ ಸೇವೆ ಈ ದೇಶಕ್ಕೆ ಬೇಕು ಅವರ ಸೇವೆ ಈಸದನಕ್ಕೆ ಬೇಕು. ಆದ್ದರಿಂದ ಅವರ ಹಕ್ಕು ಚಲಾವಣೆಯ ವಿಷಯದಲ್ಲಿ, ಮತ್ತು ಅವರು ಶಾಸಕರಾಗಿ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಕೆಲಸ ಮಾಡಲೇಬೇಕು. ಆದ್ದರಿಂದ ಈ ಬಗ್ಗೆ ಅವರಿಗೆ ಎಷ್ಟು ರಕ್ಷಣೆ ಕೊಡಬೇಕೋ ಅಷ್ಟು ರಕ್ಷಣೆಯನ್ನು ಕೊಡಬೇಕೆ ಹೊರತು, ಅವರಿಗೆ ಹಾಗೆ ನಿರ್ಬಂಧ ವನ್ನು ಹಾಕುವುದು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ರಕ್ಷಣೆ ಇರಬೇಕು, ನಿಮ್ಮ ಕ್ಷೇತ್ರಕ್ಕೆ ಹೋಗಬೇಡಿ ಎಂದರೆ ಹೇಗೆ ?

ಶ್ರೀ ವೀರಪ್ಪಮೊಯಿಲಿ.—ಅಂಗಡಿಯನ್ನು ಸುಟ್ಟು ಹಾಕುತ್ತಾರೆ ಎಂದು ಭಯಪಡುವ ಆ ಕ್ಷೇತ್ರದ ಜನಗಳಿಗೆ ನಾನು ಆಶ್ವಾಸನೆ ಕೊಡುತ್ತೇನೆ. ಏನೆಂದರೆ, ಅವರಿಗೆ ತೊಂದರೆಯಾಗದ ರೀತಿಯಲ್ಲಿ ಅವರ ಆಸ್ತಿಪಾಸ್ತಿಗಳಿಗೆ ಅನಾಹುತವಾಗದ ರೀತಿಯಲ್ಲಿ ರಕ್ಷಣೆಯನ್ನು ಸರ್ಕಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆಂದು ;

ಆ ಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಅಜೀಜ್‌ಸೇಟ್ ಅವರು ಬೆಂಗಳೂರಿನಲ್ಲಿ ಅಲ್ಲದೆ ಬೇರೆ ಕಡೆಗಳಲ್ಲಿ ಕೂಡ ಅಲ್ಪಸಂಖ್ಯಾಂತರ ಆಸ್ತಿಯಮೇಲೆ, ಮತ್ತು ಅವರ ವಿಚಾರದಲ್ಲಿ ಸರಿಯಾದ ಕಾನೂನು ವ್ಯವಸ್ಥೆ ಆಗಿಲ್ಲ, ಅವರಿಗೆ ತೊಂದರೆ ಇದೆ, ಭಯ ಇದೆ, ಎಂದು ಹೇಳಿದರು. ಆ ರೀತಿ ಅವರು ಭಯ ಭೀತರಾಗುವ ಅವಶ್ಯಕತೆ ಇಲ್ಲ.

ಶ್ರೀ ಎಂ. ಗಂಗಣ್ಣ — ಸ್ವಾಮಿ ನಾನು ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರ ಬೇಕಾಗಿದೆ. ಇದು ಬಹಳ ಮುಖ್ಯವಾದುದು ಇದರಿಂದ ಅನೇಕ ಜನಗಳಿಗೆ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರ ಪತ್ರಿಕೆಯಲ್ಲಿ ಕೂಡ ಬಂದಿದೆ ಅದು ಈ ರೀತಿ ಇದೆ.—

''ಭಾನಾಮತಿ'' ಹಿಡಿದ ಹಳ್ಳಿಯ ಕಥೆ

ಮೂಢ ನಂಬಿಕೆಗಳು, ಪವಾಡಗಳು, ಮಾಟ—ಮಂತ್ರಗಳ ಬಗ್ಗೆ ಹೇಳಿದ್ದಾಗಲಿ ಅಥವಾ ಬರದದ್ದಾಗಲಿ ಈಗ ಸವಕಲು ಮಾತು ಎನಿಸಬಹುದು.

ಆದರೆ ಅದೇ ವಿಷಯ ಒಂದು ಹಳ್ಳಿಯ ಇಡೀ ಜನ ಜೀವನದ ಗತಿಯನ್ನೇ ಒದಲಾಯಿಸಿದಾಗ ಅಷ್ಟೇ ಆಶ್ಚರ್ಯ ಕೂಡ ಆಗಬಹುದು.

ಆದ್ದರಿಂದ ಈಗ ಹೇಳುವ ಆ ವಿಷಯ ಕಟ್ಟುಕತೆಯ ಪುರಾಣದ ಮಾತುಗಳಲ್ಲ. ಮೂಢನಂಬಿಕೆಗಳು ಬೇರು ಬಿಟ್ಟು ಕಲಬುರ್ಗಿಯ ಕರಿ ನೆಲದಲ್ಲಿ ಮಾಟ ಮಂತ್ರದ ಪರಿಣಾಮ ಎಷ್ಟು ಸತ್ಯ ಎಂಬುವುದನ್ನು ಕಣ್ಣಾರೆ ನೋಡಿದಾಗ ಸತ್ಯದ ಅನುಭವವಾಗ ಬಹುದು.

ಕಲಬುರ್ಗಿಯಿಂದ ಸುಮಾರು ೯೦ ಕಿ. ಮೀ. ದೂರದ ಚಿಂಚೋಳಿ ತಾಲ್ಲೂಕಿಗೆ ಸೇರಿದ ''ಪಸ್ತಪುರ'' ಎಂಬ ಚಿಕ್ಕ ಗ್ರಾಮವಿದೆ. ಇಲ್ಲಿ ಇನ್ನೂರಕ್ಕೂ ಹೆಚ್ಚು ಮನೆಗಳಿವೆ. ಅವಿದ್ಯಾವಂತರು, ಕೃಷಿಕರೇ ಹೆಚ್ಚಿರುವ ಈ ಗ್ರಾಮದಲ್ಲಿ ಕೆಲವಾರು ವರ್ಷಗಳಿಂದ ಏಚಿತ್ರ ಪರಿಸ್ಥಿತಿ ಇಡೀ ಊರಿನ ಜನ ಜೀವನವನ್ನೇ ಅಸ್ತವ್ಯಸ್ತ ಮಾಡಿದೆ.

''ಭಾನುಮತಿ'' ಎಂಬ ಹೆಸರಿನ ಮಾಂತ್ರಿಕ ಕಲಿಯ ಪ್ರಭಾವ ಇಲ್ಲಿನ ಬಹಳಷ್ಟು ಜನರಿಗೆ ಅನುಭವವಾಗಿದೆ. ''ಭಾನಾಮತಿ'' ಎಂಬುದು ವೈಜ್ಞಾನಿಕ ದೃಷ್ಟಿಯಿಂದ ಅಸತ್ಯವೆನಿಸಿದರೂ ವಾಸ್ತವಿಕ ದೃಷ್ಟಿಯಿಂದ ಸಾವಿರ ಪಟ್ಟು ಸತ್ಯವಾಗಿದೆ.

ಈಗ ಇಲ್ಲಿ ಸುಮಾರು ೩೦–೪೦ಕ್ಕೂ ಹೆಚ್ಚು ಜನ ಇದಕ್ಕೆ ಬಲಿಯಾಗಿ ಇಡೀ ಜೀವನವನ್ನೇ ಹಾಳುಮಾಡಿಕೊಂಡ ಸತ್ಯ ಅನುಭವವಿದೆ. ಈ ''ಭಾನಾಮತಿ''ಗೆ ಒಳಗಾದ ವ್ಯಕ್ತಿ ಮತಿಭ್ರಮೆಯಾದವರಂತೆ ಹುಚ್ಚು ಹುಚ್ಚಾಗಿ ವರ್ತಿಸುತ್ತಾನೆ. ಇದಕ್ಕೆ ಬಲಿಯಾದ ವ್ಯಕ್ತಿ ತನ್ನ ದೊಡ್ಡಗಾತ್ರದ ದೇಹವನ್ನು ಚಿಕ್ಕದು ಮಾಡಿ ವೈಜ್ಞಾನಿಕವಾಗಿ ಅಸತ್ಯ ಎಂಬುವುದನ್ನೆಲ್ಲ ಸತ್ಯ ಮಾಡಿ ತೋರಿಸುತ್ತಾನೆ. ಉದಾಹರಣೆಗೆ ಇದ್ದಕ್ಕಿದ್ದ ಹಾಗೆ ಬಾಯಿಂದ ನಿಂಬೆ ಹಣ್ಣು ಬರುವುದು, ದೇಹದ ಮೇಲೆ ಕಪ್ಪನೆ ಗುರುತುಗಳು ಬೀಳುವುದು ವಿಚಿತ್ರವಾಗಿ ಕಂಡುಬರುವುದು.

ಹೀಗಾಗುವುದು ಮಾಟ–ಮಂತ್ರ ಬಲ್ಲ ವ್ಯಕ್ತಿಯಿಂದಲೇ ಎಂಬುವುದು ಸತ್ಯ. ಇಲ್ಲಿನ ಕುಟುಂಬವೊಂದರ ಕೆಲವು ಸದಸ್ಯರು ಇದನ್ನು ಕುರಿತು ಇಡೀ ಊರಿನ ಜನರ ಮೇಲೆ ಪ್ರಯೋಗಿಸುತ್ತಿದ್ದಾರೆ. ಇವರ ಪ್ರಯೋಗಕ್ಕೆ ಒಳಗಾದವರು ಹೆಚ್ಚು ಹರಿಯದ ಯುವತಿ ಯರು ಎಂಬುದು ಗಮನಾರ್ಹ. ಇವರಿಂದ ದೂರವಿರಲು ಎಷ್ಟೊ ವಮನೆಯ ಗಂಡಸರು ತಮ್ಮ ಹೆಂಡತಿಯರನ್ನು ಇವರ ಲೈಂಗಿಕ ತೃಪ್ತಿಗಾಗಿ ಕಳುಹಿಸಿ ಇವರಿಂದ ದೂರವಿರಲು ಬಯಸುತ್ತಾರೆ.

ಹೀಗೆ ವಿಚಿತ್ರ ಪರಿಸ್ಥಿತಿಗೆ ಒಳಗಾದ ಈ ಗ್ರಾಮದ ಬಗ್ಗೆ ಕೇಳುವವರು ಯಾರು ಇಲ್ಲ ದಾಗಿದೆ. ಈ ಪರಿಸ್ಥಿತಿಯಿಂದ ವಿಮುಕ್ತರಾಗಲು ಊರುಬಿಟ್ಟವರು ಎಷ್ಟೋ ಜನ. ಈ ಗ್ರಾಮದ ಜನರಿಗೆ ಇಲ್ಲಿನ ಬದುಕು ಅನಿವಾರ್ಯವಾದಾಗ ಸಮೀಪದ ಕಟಗಲೆ ಪೋಲೀಸ್ ಠಾಣೆಗೆ ಈ ಬಗ್ಗೆ ಊರಿನ ಕೆಲ ಜನ ವರದಿ ಮಾಡಿದರು. ಆದರೆ ಪೋಲೀಸಿನವರಿಗೂ ಹೆದರಿಕೆ ಈ ಘಟನೆ ಸತ್ಯವೆಂದು ಕಂಡುಬಂದು ನೂರಾರು ಜನ ಬಲಿ ಪಶುವಾಗುವಾಗ ಇಲ್ಲಿನ ಪೋಲೀಸ್, ಸರಕಾರ ಮೂಕ ಪಶುವಿನಂತೆ ದೂರದಿಂದಲೆ ನೋಡಿ ಅಲಕ್ಷಿಸುತ್ತಿದೆ.

ಈ ಸಾಮೂಹಿಕ ಅಮಾನುಷ ಕೃತ್ಯಕ್ಕೆ ಕಾರಣರಾದ ಜನ ಇಲ್ಲಿದ್ದರೂ ಯಾರೂ ಅವರ ಮೇಲೆ ಸರಿಯಾದ ಕ್ರಮ ತೆಗೆದು ಕೊಳ್ಳುತ್ತಿಲ್ಲ.

"ಭಾನಾಮತಿ"ಗೆ ಬಲಿಯಾದ ಹದಿ ಹರೆಯದ ಎಷ್ಟೋ ಹೆಂಗಸರು ಸೀರೆ ಬಿಚ್ಚಿ ನಗ್ನರಾಗಿ ಹುಚ್ಚರಂತೆ ಓಡಾಡುವಾಗ ಕೂಡ ಯಾರೂ ಈ ಪರಿಸ್ಥಿತಿಯ ಕಡೆ ಕಣ್ಣು ಎತ್ತಿ ನೋಡುತ್ತಿಲ್ಲ.

ವೈಜ್ಞಾನಿಕವಾಗಿ ಯಾವ ಕಾರಣವಿಲ್ಲದೆ ಇಡೀ ಹಳ್ಳಿಯ ಜನ ಹುಚ್ಚರಂತೆ ವರ್ತಿಸುವಾಗ ಇದಕ್ಕೆ ಮೂಲ ಕಾರಣವೇನು ಎಂಬುದು ನಿಗೂಢವಾಗುತ್ತಿದೆ.

ನವನಾಗರಿಕತೆ ಬೆಳೆಯುವ ಈ ದಿನಗಳಲ್ಲಿ ನಾಗರೀಕ ಪ್ರಪಂಚದಿಂದ ದೂರ ಉಳಿದು ಮಾಟ- ಮಂತ್ರ ವಾಸ್ತವಿಕತೆಗೆ ಎಷ್ಟು ಸತ್ಯವೆಂದು ತೋರಿಸುವ ಇಲ್ಲಿನ ವ್ಯವಸ್ಥೆ ಬಗ್ಗೆ ಸುಳ್ಳು ಮಾಡುವ ಜನ ಪ್ರಯೋಗ ಮಾಡಲಿ.

ಅಧ್ಯಕ್ಷರು.—ಮಾನ್ಯ ಸದ್ಯಸರು ಈ ಸಭೆಗೆ ಬಂದು ೨ ವರ್ಷಗಳಾಗಿದೆ. ಆದರೆ ಅವರಿಗೆ ಇನ್ನೂ ಈ ಸಭೆಯಲ್ಲಿ ವಿಷಯವನ್ನು ಹೇಗೆ ತರಬೇಕು ಎಂಬುದು ಗೊತ್ತಾಗದಿದ್ದರೆ ಹೇಗೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಸ್ವಾಮಿ, ನೋಟೀಸ್ ಕೊಡದೆ ಇದ್ದಕ್ಕಿದ್ದಹಾಗೆಯೇ ಶೂನ್ಯ ವೇಳೆಯಲ್ಲಿ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದರೆ, ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡುವುದು ಕಷ್ಟವಾಗುತ್ತದೆ. ಇಂಥಾ ಸಂದರ್ಭದಲ್ಲಿ ಸರ್ಕಾರದ ರಕ್ಷಣೆಗೆ ಅಧ್ಯಕ್ಷರು ಬರಬೇಕು.

CALLING ATTENTION TO A MATTER OF URGENT PUBLIC IMPORTANCE

Non-implementation of the 12 weeks compulsory Kannada Film Exhibition.

ಶ್ರೀ ಕೆ. ಎಚ್. ಶ್ರೀನಿವಾಸ್.— ಸ್ವಾಮಿ ೧೨ ವಾರಗಳು ಕಡ್ಡಾಯ ಕನ್ನಡ ಚಿತ್ರಗಳ ಪ್ರದರ್ಶನದ ನಿಯಮವನ್ನು ಜಾರಿಗೊಳಿಸದಿರುವ ಹಾಗೂ ಆದರಿಂದ ಕನ್ನಡ ಚಿತ್ರಉದ್ಯಮಕ್ಕೆ ಉಂಟಾದ ತೊಂದರೆಗಳ ಕಡೆಗೆ ಮಾನ್ಯ ಮಂತ್ರಿಗಳ ಗಮನವನ್ನು ನಾನು ಸೆಳೆಯುತ್ತೇನೆ.

SRI M. VEERAPPA MOILY.—Sir,.....

ಶ್ರೀ ಎಂ. ಪಿ. ನಾನಯ್ಯ.— ಸ್ವಾಮಿ ಕನ್ನಡ ಚಲನಚಿತ್ರದ ಬಗ್ಗೆ ಮಾನ್ಯ ಮಂತ್ರಿಗಳು ಇಂಗ್ಲೀಷಿನಲ್ಲಿ ಉತ್ತರ ಕೊಡುತ್ತಿದ್ದಾರೆ. ಮಾನ್ಯ ಸದಸ್ಯರು ಕನ್ನಡದಲ್ಲಿ ಕೇಳಿದ ಪ್ರಶ್ನೆಗೆ ಕನ್ನಡವಲ್ಲಿ ಉತ್ತರ ಕೊಡಬೇಕು. ಇಂಗ್ಲೀಷಿನಲ್ಲಿ ಕೇಳಿದರೆ ಇಂಗ್ಲೀಷಿನಲ್ಲಿ ಉತ್ತರಕೊಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.—ಇನ್ನು ಮುಂದೆ ಕನ್ನಡದಲ್ಲಿಯೇ ಹೇಳಿಕೆಕೊಡುತ್ತೇನೆ.

The Notification amending the Cinematographic Rule has been issued on 6th July 1979 *vide* Government Order No. HD 59 CNA 79 amending the Form 'F' and Form 'G' of the Karnat ka Cinemas (Regulation) Rules 1971 under the heading "Conditions of the Licence" inserting the following conditions after conditions No. 12 and 13 relating to permanent theatres and Touring cinemas respectively.

"12A. The Licensee shall exhibit Kannada Film for a period of not less than twleve weeks in a year".

"13A. The licensee shall exhibit Kannada Fim for a period of not less than one fourth of the period to which the licence is granted' .